# 16th India-Singapore Foreign Office Consultations

August 20, 2022

---

### 16ನೇ ಭಾರತ-ಸಿಂಗಪುರ ವಿದೇಶಾಂಗ ಕಚೇರಿ ಸಮಾಲೋಚನೆಗಳು

ಆಗಸ್ಟ್ 20, 2022

ಭಾರತ ಮತ್ತು ಸಿಂಗಾಪುರದ ನಡುವಿನ 16ನೇ ವಿದೇಶಾಂಗ ಕಚೇರಿ ಸಮಾಲೋಚನೆಗಳು 19 ಆಗಸ್ಟ್ 2022 ರಂದು ಸಿಂಗಾಪುರದಲ್ಲಿ ನಡೆದವು ಹಾಗೂ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ (ಪೂರ್ವ) ಶ್ರೀ ಸೌರಭ್ ಕುಮಾರ್ ಮತ್ತು ಸಿಂಗಾಪುರದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಖಾಯಂ ಕಾರ್ಯದರ್ಶಿ ಶ್ರೀ ಆಲ್ಬರ್ಟ್ ಚುವಾ ಅವರು ಸಹ-ಅಧ್ಯಕ್ಷರಾಗಿದ್ದರು.

2. ವಿದೇಶಾಂಗ ಕಚೇರಿ ಸಮಾಲೋಚನೆಗಳ ಸಮಯದಲ್ಲಿ, ಎರಡೂ ಕಡೆಯವರು ದ್ವಿಪಕ್ಷೀಯ ಸಂಬಂಧಗಳ ಸಂಪೂರ್ಣ ಶ್ರೇಣಿಯನ್ನು ಪರಿಶೀಲಿಸಿದರು ಹಾಗೂ ಪ್ರಸ್ತುತ ಮಟ್ಟದ ಕಾರ್ಯಗಳ ಬಗ್ಗೆ ತೃಪ್ತಿ ವ್ಯಕ್ತಪಡಿಸಿದರು. ಪಾಲುದಾರಿಕೆಯ ಸಂಪೂರ್ಣ ಸಾಮರ್ಥ್ಯವನ್ನು ಅರಿತುಕೊಳ್ಳಲು ದ್ವಿಪಕ್ಷೀಯ ರಾಜಕೀಯ ವಿನಿಮಯದ ಮಹತ್ವವನ್ನು ಎರಡೂ ಕಡೆಯವರು ಒತ್ತಿ ಹೇಳಿದರು. ನಿಯೋಗಗಳು ವ್ಯಾಪಾರ ಮತ್ತು ಹೂಡಿಕೆ, ಸ್ಟಾರ್ಟ್‌ಅಪ್‌ಗಳು ಮತ್ತು ನಾವೀನ್ಯತೆ, ಫಿನ್‌ಟೆಕ್, ಸ್ಮಾರ್ಟ್ ಸಿಟಿಗಳು, ಮೂಲಸೌಕರ್ಯ, ಕೌಶಲ್ಯ ಅಭಿವೃದ್ಧಿ ಮತ್ತು ಸಂಪರ್ಕ ಸೇರಿದಂತೆ ಹಲವಾರು ಕ್ಷೇತ್ರಗಳಲ್ಲಿ ಸಹಕಾರವನ್ನು ಹೆಚ್ಚಿಸುವ ಕುರಿತು ಚರ್ಚಿಸಿದವು. ಎರಡೂ ದೇಶಗಳ ನಡುವಿನ ರಕ್ಷಣಾ ಸಹಕಾರವನ್ನು ಸಹ ಪರಿಶೀಲಿಸಲಾಯಿತು. ಇತ್ತೀಚಿನ ತಿಂಗಳುಗಳಲ್ಲಿ ಭಾರತದಿಂದ ಪ್ರವಾಸಿಗರ ಆಗಮನದ ಹೆಚ್ಚಳ ಮತ್ತು ಪ್ರಯಾಣವನ್ನು ಇನ್ನಷ್ಟು ಸುಗಮಗೊಳಿಸುವ ಅಗತ್ಯವನ್ನು ಎರಡು ಕಡೆಯವರು ಗಮನಿಸಿದರು. ಸಿಂಗಾಪುರವು ಏಷಿಯಾನ್‌ನಲ್ಲಿ ಭಾರತಕ್ಕೆ ಪ್ರಸ್ತುತ ದೇಶದ ಸಂಯೋಜಕರಾಗಿರುವುದರಿಂದ, ಭಾರತ-ಏಷಿಯಾನ್ ಕಾರ್ಯಗಳನ್ನು ಮತ್ತು ಸಂಬಂಧವನ್ನು ಉನ್ನತ ಮಟ್ಟಕ್ಕೆ ಏರಿಸುವ ಕುರಿತು ಎರಡೂ ಕಡೆಯವರು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು. ಪರಸ್ಪರ ಹಿತಾಸಕ್ತಿಯ ಪ್ರಾದೇಶಿಕ ಮತ್ತು ಅಂತರಾಷ್ಟ್ರೀಯ ವಿಷಯಗಳ ಬಗ್ಗೆಯೂ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳಲಾಯಿತು. ಭಾರತ-ಸಿಂಗಾಪುರ್ ಬಹುಮುಖಿ ಸಂಬಂಧಗಳನ್ನು ಮತ್ತಷ್ಟು ಬಲಪಡಿಸುವ ಮತ್ತು ಕಾರ್ಯತಂತ್ರದ ಪಾಲುದಾರಿಕೆಯನ್ನು ಗಾಢವಾಗಿಸುವ ನಿಟ್ಟಿನಲ್ಲಿ ಕೆಲಸ ಮಾಡುವ ತಮ್ಮ ದೃಢ ಬದ್ಧತೆಯನ್ನು ಎರಡು ಕಡೆಯವರು ಪುನರುಚ್ಚರಿಸಿದರು.

3. ವಿದೇಶಾಂಗ ಕಚೇರಿ ಸಮಾಲೋಚನೆಗಳ ಮುಂದಿನ ಸುತ್ತು ಪರಸ್ಪರ ಅನುಕೂಲಕರ ದಿನಾಂಕಗಳಲ್ಲಿ ನವದೆಹಲಿಯಲ್ಲಿ ನಡೆಯಲಿದೆ.

**ನವ ದೆಹಲಿ**

**ಆಗಸ್ಟ್ 19, 2022**

DISCLAIMER: This is an approximate translation. The original is available in English on MEA's website and may be referred to as the official press release.